

## ಯಾವ ರಿಂಗ್?

'ಪ್ರಿಯಾ, ಮುಂದಿನ ವಾರವೇ ನನ್ನ ಹುಟ್ಟುಹಬ್ಬ.'

'ಹೌದಲ್ವಾ ಚಿನ್ನಾ, ನಿಂಗೇನು ಬೇಕೋ ಕೇಳು.'

'ಒಂದು ರಿಂಗ್ ಕೊಡ್ತಿಯಾ?'

'ಓ ಅಷ್ಟೇ ತಾನೆ. ಲ್ಯಾಂಡ್ ಲೈನಿಗೊ, ಮೊಬೈಲ್ಗೋ?!'

★★★

## ಹೂವಿನ ಹಾರ ಯಾರಿಗೆ?

ರೋಗಿ: ಸಿಸ್ಟರ್, ಈ ಹೂವಿನ ಹಾರ ಯಾರಿಗೆ?

ನರ್ಸ್: ಇದು ನಮ್ಮ ಡಾಕ್ಟರ್ ಮಾಡ್ತಿರೋ ಮೊದಲನೇ ಆಪರೇಷನ್. ಸಕ್ಸಸ್ ಆದ್ರೆ ಈ ಹಾರ ಅವರಿಗೆ ಹಾಕ್ತೀವಿ. ಇಲ್ದೆ ಇದ್ರೆ ನಿಂಗೆ!

**(ಸಂ) ಕೆ.ಪಿ. ಸತ್ಯನಾರಾಯಣ, ಹಾಸನ**

ಹೋಟೆಲ್ ಭರ್ತಿ ಇತ್ತು. ಗಿರಾಕಿ ಗಲಾಟೆ ಮಾಡುತ್ತಿದ್ದುದನ್ನು ಕಂಡು ಮಾಲೀಕರು ವಿಚಾರಿಸಿದರು.

'ಏನ್ಸಾರ್ ಏನಾಯ್ತು?'

'ಏನು ಅಂತೀರಲ್ರೀ ಈ ಗ್ಲಾಸ್ ನೀರು ಎಷ್ಟು ಗಲೀಜಾಗಿದೆ ನೋಡ್ರಿ...'

ಮಾಲೀಕರು ಗ್ಲಾಸ್ ಎತ್ತಿ ಪರಿಶೀಲಿಸಿದರು.

'ಸಾರ್, ನಾವು ಶುದ್ಧೀಕರಿಸಿದ ನೀರನ್ನೇ ಕೊಡೋದು. ನೀರು ಚೆನ್ನಾಗಿದೆ. ಗ್ಲಾಸ್ ತೊಳೆದಿಲ್ಲ ಅಷ್ಟೇ!'

★★★

'ದಿನಾಲೂ ನನ್ನ ಹೆಂಡತಿ ಸಂಜೆ ಮನೆಗೆ ಬಂದ ತಕ್ಷಣ ಬಲಗೈ ಹಿಡಿದು ಮುಂಗೈಗೆ ಮುತ್ತು ಕೊಡ್ತಾಳೆ.'

'ಅಷ್ಟೊಂದು ಪ್ರೀತೀನಾ ನಿನ್ನ ಮೇಲೆ!'

'ಪ್ರೀತೀನೂ ಇಲ್ಲ– ಗೀತೀನೂ ಇಲ್ಲ. ಎಲ್ಲಿ ಅವಳನ್ನು ಬಿಟ್ಟು ಮಸಾಲೆ ದೋಸೆ ತಿಂದು ಬಂದಿದೀನೋ ಅಂತ ಮೂಸಿ ಚೆಕ್ ಮಾಡ್ತಾಳೆ ಅಷ್ಟೇ!'

**(ಸಂ) ಕೆ. ಶ್ರೀನಿವಾಸರಾವ್, ಹರಪನಹಳ್ಳಿ**

## ವಾರಂಟಿ ಮುಗಿದಿದೆ!

ಹೆಂಡತಿಯ ಬಗ್ಗೆ ಕೋಪಗೊಂಡಿದ್ದ ಗುಂಡ ತನ್ನ ಮಾವನಿಗೆ ಮೆಸೇಜ್ ಕಳಿಸಿದ: 'ನಿಮ್ಮ ವಸ್ತು ನನ್ನ ನಿರೀಕ್ಷೆಗೆ ತಕ್ಕಂತೆ ಇಲ್ಲ. ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಿ.'

ಕೂಡಲೆ ಮಾವನಿಂದ ಪ್ರತ್ಯುತ್ತರ ಬಂತು: 'ವಾರಂಟಿ ಮುಗಿದಿದೆ. ತಯಾರಕರು ಯಾವುದಕ್ಕೂ ಜವಾಬ್ದಾರರಲ್ಲ!'

★★★

## ಬ್ರೇಕಿಂಗ್ ನ್ಯೂಸ್!

ವಾರ್ತಾ ವಾಹಿನಿಯಲ್ಲೊಂದು ಬ್ರೇಕಿಂಗ್ ನ್ಯೂಸ್ ಈ ಪರಿ ಸಾಗಿತ್ತು.

'ಹುಡುಗಿಯರ ಹಾಸ್ಟೆಲಿನಲ್ಲಿ ಬೆಂಕಿ ಹತ್ತಿಕೊಂಡಿತು, ಬಾಯ್ಸ್ ಹಾಸ್ಟೆಲಿನ ಹುಡುಗರು ಬೆಂಕಿ ನಂದಿಸಲು ಸಹಾಯ ಮಾಡಿದರು ಮತ್ತು ಧಗಧಗನೆ ಉರಿಯುತ್ತಿದ್ದ ಬೆಂಕಿಯನ್ನು ಹತೋಟಿಗೆ ತರಲಾಯಿತು. ಆದರೆ... ಇದೀಗ ಹುಡುಗರನ್ನು ಹತೋಟಿಗೆ ತರಲು ಶತಾಯ ಗತಾಯ ಪ್ರಯತ್ನ ಜಾರಿಯಲ್ಲಿದೆ...!'

★★★

## ಅಭ್ಯಾಸ!

ಗೋಪಿ ಬಿಯರ್ ಕುಡಿದು ಮನೆಗೆ ಮರಳಿದ ಬಳಿಕ ಅಪ್ಪನಿಗೆ ಸುಳಿವು ಸಿಗಬಾರದೆಂದು ಲ್ಯಾಪ್‌ಟಾಪ್ ತೆರೆದು ಅಭ್ಯಾಸ ಮಾಡಲಾರಂಭಿಸಿದನು.

ಅಪ್ಪ: ಯಾಕೋ... ಕುಡಿದು ಬಂದಿರುವೆಯಾ?

ಗೋಪಿ: ಇಲ್ವಲ್ಲಾ...!



ಅಪ್ಪ: ಮತ್ತೇಕೆ ಸೂಟ್‌ಕೇಸ್ ತೆರೆದಿಟ್ಟು ಆ ಪಾಟಿ ದಿಟ್ಟಿಸುತ್ತಿರುವೆ?

★★★

## ಯೋಚನೆ

ಗೋಪಿ: ನಾನು ವಿದೇಶ ಪ್ರವಾಸ ಹೋಗಬೇಕೆಂದು ಯೋಚಿಸುತ್ತಿದ್ದೇನೆ.

ರಾಮು: ಅದಕ್ಕೆ ತುಂಬಾ ಹಣ ಖರ್ಚಾಗಬಹುದಲ್ಲವೆ?

ಗೋಪಿ: ಇಲ್ಲ; ಯೋಚಿಸಲಿಕ್ಕೆ ಹಣ ಖರ್ಚು ಮಾಡಬೇಕಾಗಿಲ್ಲ!

**(ಸಂ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**